Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

## ಬೇಂದ್ರೆ ಮತ್ತು ಮಧುರಚೆನ್ನರ ಆಧ್ಯಾತ್ಮಿಕ ಬಾಂಧವ್ಯ..

**ಸತ್ಯಮಂಗಲ ಮಹಾದೇವ**.

ಕಾಣುವುದು ಒಂದು ನೋಡುವುದು ಒಂದು
[ಪ್ರತಿಬಿಂಬಗಳು: ಅರಿವು ಮರೆವು]

ನಾವು ಬರಿಗಣ್ಣಿಗೆ ಕಾಣುವುದನ್ನು ಪ್ರಮಾಣೀಕರಿಸುತ್ತೇವೆ. ನೋಡುವುದಕ್ಕೆ ಸಾಧ್ಯವಾಗದೇ ಅನುಭವಕ್ಕೆ ಬಂದ ಘಟನೆಗಳನ್ನು, ಲೌಕಿಕ ಜೀವನದಲ್ಲಿ ವಿಸ್ಮಯವೆಂದೋ ಅಥವಾ ವಿಚಿತ್ರವೆಂದೋ ದೂರವಿಡುತ್ತೇವೆ. ಇಂದಿನ ದಿನಮಾನದಲ್ಲಿ ಸಹಜವಾದ ಬದುಕು ವಿಚಿತ್ರವೆಂದೂ, ಅಸಹಜವಾದ ಆಕರ್ಷಣೆಯ ಕ್ಷಣಿಕ ಸುಖಗಳು ಸೃಷ್ಟಿಸುವ ಭ್ರಮಾತ್ಮಕ ಲೋಕವೇ ಸಹಜವಾದುದೆಂದು ನಂಬಿಸಿದ್ದಾರೆ ಮತ್ತು ನಂಬಿದ್ದೇವೆ. ನಾವು ನಂಬಿದ ಇಂತಹ ಆಚರಣೆಗಳಿಗೆ ನಮ್ಮ ಅಳತೆಗೋಲುಗಳನ್ನು ನಿರ್ಮಿಸಿಕೊಂಡು ಆಧ್ಯಾತ್ಮ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದ್ದೇವೆ. ಕಾಣುವುದನ್ನು ನಾವು ಅಂತರಂಗದ ಬೆಳಕಿನಲ್ಲಿ ದರ್ಶನ ಮಾಡಲು ಸಾಧ್ಯವಾದರೆ ಈ ಭ್ರಮೆಯ ಪೊರೆ ಕಳಚಿ ವಾಸ್ತವದ ಸಹಜ ಪ್ರತ್ಯಕ್ಷಾನುಭವ ನಮಗೆ ಉಂಟಾಗುತ್ತದೆ. ಅಸಹಜ ಬದುಕಿನ ಸಿನಿಕತೆಯನ್ನು ಹೋಗಲಾಡಿಸಲು ನಮಗೆ ನಮ್ಮ ಕನ್ನಡ ಸಾಹಿತ್ಯದಲ್ಲಿ ವಿಪುಲವಾದ ಅನೇಕ ಕೃತಿಗಳು ಸಿಗುತ್ತವೆ. ಬದುಕನ್ನೇ ಕೃತಿಯಾಗಿಸಿದ ವರಕವಿ ಬೇಂದ್ರೆ ಅನುಭಾವಜೀವಿ ಮಧುರಚೆನ್ನರ ಆಧ್ಯಾತ್ಮಿಕ ಬಾಂಧವ್ಯದ ಚಿಂತನೆಗಳು ನಾವು ಬರಿಗಣ್ಣಿನಲ್ಲಿ ಕಾಣುವುದನ್ನು ಹೇಗೆ ನೋಡಬೇಕೆಂಬ ತಾತ್ವಿಕ ಚಿಂತನೆಯನ್ನು ಹೃದಯದಲ್ಲಿ ಅರಳಿಸುತ್ತವೆ. ಹೀಗೆ ಹೃದಯವನ್ನು ಅರಳಿಸುವ ಭಾವಪುಷ್ಪಗಳು ಅನಂತಶಕ್ತನ ಚಿಂತನೆಯನ್ನು ಕೆನೆಹಾಲಿನಂತೆ ಕಳೆಗಟ್ಟುವಂತೆ ಮಾಡುತ್ತವೆ ಎಂಬುದು ನನ್ನ ನಂಬಿಕೆ.

ಬೇಂದ್ರೆ ಮತ್ತು ಮಧುರಚೆನ್ನರ ಬಾಂಧವ್ಯ ಅದು ಸಹಜವಾದ ಗೆಳೆತನವೇ ಆದರೂ ಅವರೊಳಗಿದ್ದ ಆಧ್ಯಾತ್ಮಿಕ ಒಲವು-ನಿಲುವುಗಳು ಅವರನ್ನು ಆಧ್ಯಾತ್ಮಿಕ ನೆಲೆಯ ಸಖ್ಯಭಾವವನ್ನು ಬೆಸೆಯುವಂತೆ ಪ್ರೇರೇಪಿಸಿದವು. ಇಬ್ಬರೂ ನಂಬಿದ ಗುರುಗಳು ಒಬ್ಬರೇ ಶ್ರೀಅರವಿಂದರು, ಇಬ್ಬರೂ ನಂಬಿದ ಮಾತೃತ್ವದ ಭಗವತ್ ಚಿಂತನೆ ಒಬ್ಬರೇ ಶ್ರೀಮಾತೆಯವರು. ಆದರೆ ಇಬ್ಬರೊಳಗಿನ ಸಾಧನೆಯ ಗುರಿ ಅನುಭಾವವೇ ಆದರೂ ತಾವು ಕ್ರಮಿಸಿದ ಹಾದಿ ಬೇರೆ ಬೇರೆ.

ನನ್ನ ನಿನ್ನ ಬೆನ್ನ ಬಳಿ ವಿಶಾಲವೃಕ್ಷ ಬೆಳೆದಿದೆ
ಮುಗಿಲ ತುಂಬಿ ಉಳಿದಿದೆ
ಗಾಳಿಯಂತೆ ಸುಳಿದಿದೆ
ನನ್ನ ನಿನ್ನ ನೋಟ ಮಾತ್ರ ಎರಡುದಿಕ್ಕಿಗೆಳೆದಿದೆ
ಬೇರೆ ಹಾದಿ ತುಳಿದಿದೆ

-ಬೇಂದ್ರೆ; ಚೆನ್ನ; ನಾದಲೀಲೆ

ಈ ಕಾವ್ಯದ ಸಾಲುಗಳಲ್ಲಿ ತಮ್ಮ ಆಧ್ಯಾತ್ಮಿಕ ಬಾಂಧವ್ಯದ ನೆಲೆಯನ್ನು ಸ್ಪಷ್ಟವಾಗಿ ಬೇಂದ್ರೆಯವರು ನಿರೂಪಿಸಿದ್ದಾರೆ.

ನೀ ಕಿಚ್ಚು ನಾ ಕೆಂಡ ಬೆನ್ನು ಬೆನ್ನಲಿ ಬೆಸೆದ
ಏಕ ತೇಜದ ಎರಡು ಹಿರಿಕಿರಿಯ ಪಿಂಡಗಳ
ಬೆಳಗಿಸುವ ಜಗಜ್ಯೋತಿ ಅರವಿಂದ ಯೋಗಿಗಳ
ಹೃದಯಸ್ಥ ವಿಶ್ವಭಾನು

-ಅಣ್ಣಯ್ಯನಿಗೆ; ನನ್ನ ನಲ್ಲ

ಈ ಕಾವ್ಯದ ಸಾಲುಗಳಲ್ಲಿ ತಮ್ಮ ಆತ್ಮಸಾಂಗತ್ಯದ ಅಧ್ಯಾತ್ಮಿಕ ಹುಡುಕಾಟದ ಮೂಲನೆಲೆಯನ್ನು ಮಧುರಚೆನ್ನರು ಬಿಡಿಸಿಟ್ಟಿದ್ದಾರೆ. ಈ ಇಬ್ಬರೂ ಕವಿಗಳಲ್ಲಿ ಅಂತರ್ಗತವಾದ ಕಾವ್ಯಶಕ್ತಿಯು ಇಬ್ಬರೊಳಗೂ ಕಂಡ ಕಾಣ್ಕೆಯನ್ನು ಜೀವಸೆಲೆಯಂತೆ ಹರಿಸಿದೆ.

ಈ ಇಬ್ಬರೂ ಕವಿಗಳ ಕವಿತೆಗಳು ಅನುಭಾವದ ಒಳತೋಟಿಯಲ್ಲಿ ಮಿಡಿದ ಏಕಭಾವವನ್ನು ಮತ್ತು ಭಿನ್ನ ನಡೆಗಳನ್ನು ತುಂಬಾ ಸಮರ್ಥವಾಗಿ ಹೇಳುತ್ತಿವೆ. ಕಾವ್ಯವು ಮಿಡಿದ ಹೃದಯಗಳ ಭಾವೋನ್ಮಿಲನಕ್ಕೆ ಕಾರಣರಾದವರು ಶ್ರೀ ಅರವಿಂದರು 'ವಿಶ್ವಭಾನು' ವಾಗಿ ಅಂತರಂಗವನ್ನು ಬೆಳಗಿದ್ದಾರೆ. ಆದರೆ 'ಕಿಚ್ಚು ಮತ್ತು ಕೆಂಡ' ಗಳ ಒಳಗೆ ಭಿನ್ನವಾಗಿ ಬೆಳೆದ ಅಂತರಂಗದ ಸಾಧನೆ ಇರುವುದನ್ನು ಗಮನಿಸಬೇಕಾಗಿದೆ.

ದೃಷ್ಟಿಯೊಳಗೆ ಮಿಡಿದ ಬೆಳಕು ಒಂದೇ ಮೂಲದ್ದು. ನೋಟ ಮಾತ್ರ ಎರಡು ದಿಕ್ಕಿಗೆ ಎಳೆದ ಬೇರೆ ಬೇರೆ ತಾತ್ವಿಕ ಒಳನೋಟಗಳು ಎಂಬುದನ್ನು ಇಬ್ಬರೂ ಕವಿಗಳು ತಮ್ಮ ಅಂತರಂಗದ ಮಾತನ್ನು ತಮ್ಮ ಕಾವ್ಯಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಕನ್ನಡದ ಪಾಲಿಗೆ ನವೋದಯ ಕಾವ್ಯದ ಕಾಲಘಟ್ಟದ ಈ ಇಬ್ಬರು ಕವಿಗಳ ದರ್ಶನ ಮತ್ತು ಯೋಗಸಾಧನೆಯ ಕವನಮಾರ್ಗ ಅನುಭಾವದ ನೆಲೆಯನ್ನು ವಿಸ್ತರಿಸಿದ ದಾರಿಯಾಗಿದೆ. ಶ್ರೀ ಅರವಿಂದರ ಪ್ರಭಾವದಿಂದ ರೂಪುಗೊಂಡ ಈ ಇಬ್ಬರು ಕವಿಗಳ ಕಾವ್ಯದ ಸತ್ವ ಅನುಭಾವವೇ ಆಗಿದೆ.

ಬೇಂದ್ರೆಯವರ ಕಾವ್ಯದಲ್ಲಿ ಉಪಾಸನೆಯ ಧ್ಯಾನದ ನೆಲೆ ಮತ್ತು ವಿವಿಧ ಸ್ತರಗಳಲ್ಲಿ ವಿಸ್ತರಿಸಿದ ಅಧ್ಯಾತ್ಮಿಕ ವಿಧಾನಗಳಲ್ಲಿನ ತಾತ್ವಿಕ ಸತ್ವಗಳ ಹುಡುಕಾಟದೊಳಗೆ ಅನುಭಾವ ಸೆಲೆಯೊಡೆದಿದೆ. ಇದು ಅವರ ಗದ್ಯ ಮತ್ತು ಕವಿತೆಗಳಲ್ಲಿ ಸಾಂದ್ರವಾಗಿ ವ್ಯಕ್ತವಾಗುತ್ತದೆ.

ಮಧುರಚೆನ್ನರ ಕಾವ್ಯದಲ್ಲಿ ಅನ್ವೇಷಣೆ ಮತ್ತು ಶೋಧದ ನೆಲೆಯಲ್ಲಿ ಅನುಭಾವವು ಜೀವಸತ್ವವಾಗಿದೆ. ವಿಸ್ತಾರವಾದ ನೆಲೆಯಲ್ಲಿ ಆಧ್ಯಾತ್ಮಿಕ ಸತ್ವಗಳನ್ನು ಹುಡುಕುವ ಮಾರ್ಗದಲ್ಲಿ ಬೇಂದ್ರೆಯವರ ಕಾವ್ಯ ಹರಳುಗಟ್ಟುತ್ತದೆ. ಆಳವಾದ ಶೋಧನೆ ಅದು ತನ್ನಿಂದಲೇ ಸಾಕ್ಷೀಕರಿಸಿಕೊಂಡ ತನ್ನ ಅಂತರಾತ್ಮದ ಹುಡುಕಾಟದಲ್ಲಿ ಕಾವ್ಯಾನುಭವವಾಗಿ ಹೊಮ್ಮುತ್ತದೆ. .

ಈ ಇಬ್ಬರೂ ಕವಿಗಳಲ್ಲಿನ ಕಾವ್ಯದಲ್ಲಿ ಧ್ವನಿಸುವ ತಾತ್ವಿಕತೆ ಅದು ಲೌಖಿಕ ಪರಿಸರದಿಂದ ಬಿಡಿಸಿಕೊಂಡು ಯೌಗಿಕ ಪ್ರಯಾಣದಲ್ಲಿ ಸಾಗುತ್ತದೆ. ಆದರೆ ಇಬ್ಬರೂ ತಮ್ಮ ತಮ್ಮ ಅನುಭಾವದ ನೆಲೆಗೆ ತಲುಪಲು ಬಳಸಿದ ಹಾದಿ ಮಾತ್ರ ಬೇರೆ ಬೇರೆ. ಅಲ್ಲಿರುವ ಭಿನ್ನತೆಗಳನ್ನು ಹೀಗೆ ಗುರುತಿಸಬಹುದು.

ಬೇಂದ್ರೆಯವರಿಗೆ ಮಧುರಚೆನ್ನರ ಆತ್ಮಸಾಧನೆ ಕುರಿತು ಹೆಮ್ಮೆ ಮತ್ತು ಗೌರವ ಅಪಾರವಾಗಿದೆ.

'ಮಧುರಗೀತ' ವ ಹಾಡಿ 'ನನ್ನ ನಲ್ಲ' ನ ಒಲಿಸಿ
ಹಲಸಂಗಿ ನಾಡಿನಲಿ ನೆಲೆಸಿ ನಿಂತ
ನನ್ನ 'ಚೆನ್ನ' ನಿಗೆಣೆಯ ಗೆಣೆಯರಾರಿಹರು?
ಅವನೆ ಅವನಿಗೂ ಹೆಚ್ಚು ಅವನಿಗಿಂತ!

-ಜೀವಲಹರಿ; ಅರಳು ಮರುಳು

ನನ್ನ ಗೆಳೆಯನಿಗಿಂತ ಹೆಚ್ಚು ಯಾರು? ಎಂಬ ಪ್ರಶ್ನೆಯಲ್ಲೇ ಗೆಳೆಯನ ಬಗ್ಗೆ ಹೆಮ್ಮೆಪಡುವುದು, 'ಅವನೇ ಅವನಿಗೂ ಹೆಚ್ಚು ಅವನಿಗಿಂತ' ಎನ್ನುವ ಮಾತಿನಲ್ಲೇ ಮಧುರಚೆನ್ನರ 'ಆತ್ಮಶೋಧ' ದ ಕುರಿತು ಅವರಿಗಿದ್ದ ನಂಬಿಕೆಯನ್ನು ಸ್ಪಷ್ಟಪಡಿಸಿದ್ದಾರೆ.

ತೋಟ ಮೂಡಿದೆ ನೋಡು ಕಾಡಿದ್ದ ಎಡೆಯಲ್ಲಿ

ಅಲ್ಲಿ ಮೌನಗ ತಂತಿ ಮೀಟುತಿಹುದು
ಶ್ರುತಿಗು ನಿಲುಕದ ನುಡಿಯು ದನಿಗೂಡುವುದಾಗೀಗ
ಯಾರು ಬಲ್ಲರು? ನಾಳೆ ಮೂಡಬಹುದು

-ಜೀವಲಹರಿ; ಅರಳು ಮರುಳು

'ಹಲಸಂಗಿ' ಎಂಬ ಕಗ್ಗಾಡಿನಂತಹ ಊರಿನ ಕಡೆ ಇಂದು ಎಲ್ಲರೂ ತಿರುಗಿನೋಡುವಂತೆ ಮಾಡಿದ್ದು ಮಧುರಚೆನ್ನರ ಆತ್ಮದಶಕ್ತಿ, ಆಧ್ಯಾತ್ಮಿಕ ಸಾಧನೆ. ಅದು ಅಬ್ಬರವಿಲ್ಲದ ಮೌನ ಆಧ್ಯಾತ್ಮದ ಫಲ. ಅಂತಹ ಸಾಧನೆಯನ್ನು ಮಾಡಿದ ಗೆಳೆಯನ ಬಗ್ಗೆ ಬೇಂದ್ರೆಯವರಿಗೆ ಎಲ್ಲಿಲ್ಲದ ಹಿಗ್ಗು.

ಅಣ್ಣ ಬೇಂದ್ರೆಯವರೆಂದರೆ ಮಧುರಚೆನ್ನರಿಗೂ ಅಷ್ಟೇ ಗೌರವ ಮತ್ತು ಪ್ರೀತಿ. ಬೇಂದ್ರೆಯವರು ತೋರಿಸಿದ ಪ್ರೀತಿಗಿಂತ ಮರಳಿ ತನ್ನ ಅಣ್ಣ ದತ್ತನ ಮನಸ್ಸಿನಲ್ಲಿ ಈ ಲೌಕಿಕದ ಕುರಿತು ಏಳುತ್ತಿದ್ದ ಪ್ರಶ್ನೆಗಳು? ತಮ್ಮ ಮಕ್ಕಳನ್ನು ಕಳೆದುಕೊಂಡು ರಣರಂಗವಾಗಿದ್ದ ಅವರ ಮನಸ್ಸನ್ನು ತಣಿಸು ಎಂದು ಕಾಲರುದ್ರನನ್ನು ಬೇಡಿದ್ದಾರೆ.

ಕಣ್ಣಲ್ಲಿ ಕಿಸುಗಿಚ್ಚು ಕಟ್ಟಿಹಾಕಿದ ನಮ್ಮ
ಕಾಲರುದ್ರನೇ ಇತ್ತ ಕಣ್ಣಿಟ್ಟು
ಅಣ್ಣ ದತ್ತನ ಬಗೆಯ ಬೇಗೆಯನು ತಣಿಸೈ

-ನನ್ನ ನಲ್ಲ; ಮಂಗಲ ಸಪ್ತಕಂ

ಈ ಮಾತುಗಳನ್ನು ಪಂಚಪ್ರಾಣದಂತೆ ಇರುವ 'ಭಾರತೀಯ ಆಧ್ಯಾತ್ಮಿಕ ಪರಂಪರೆಯ ಪೂಜ್ಯ ಪ್ರದೀಪಗಳಾದ ಕಾಲರುದ್ರ, ಶಿವ, ವರ್ಧಮಾನ, ಮಹಾವೀರ, ಬುದ್ಧ, ಬಸವ,ಅಲ್ಲಮಪ್ರಭು ಇವರುಗಳಲ್ಲಿ ಪ್ರಾರ್ಥಿಸಿದ್ದಾರೆ. ಹೀಗೆ ಪರಸ್ಪರ ಹಾರೈಸುವುದು, ತನ್ನ ಸ್ನೇಹಿತರ ಕುರಿತು ಪರಸ್ಪರ ಪರಾತ್ಪರ ಶಕ್ತಿಯಲ್ಲಿ ಬೇಡಿಕೊಳ್ಳುವುದು ಈ ಇಬ್ಬರು ಕವಿಗಳ ಆಧ್ಯಾತ್ಮಿಕ ಭಾವದ ಅರಿವಾಗಿದೆ. ಈ ಇಬ್ಬರೂ ಕವಿಗಳ ಸ್ನೇಹದಲ್ಲಿ ಇಂತಹ ಹಾರೈಕೆಗಳ ಸಾದೃಶ್ಯವಿದ್ದಾಗ್ಯೂ ಪರಸ್ಪರ ಅಭಿಪ್ರಾಯಭೇದ ಸದಾ ಇತ್ತು.

ಬೇಂದ್ರೆ ಕಾವ್ಯ ವಿಮರ್ಶಕರಾದ ಡಾ. ಜಿ. ಕೃಷ್ಣಪ್ಪನವರು ನನ್ನನ್ನು ಮಧುರಚೆನ್ನರ ಆಧ್ಯಾತ್ಮಿಕ ಕರ್ಮಭೂಮಿ ಹಲಸಂಗಿಗೆ ದಿನಾಂಕ:07.12.2016ರಂದು ಕರೆದುಕೊಂಡು ಹೋಗಿದ್ದರು. ಮಧುರಚೆನ್ನರು ಬದುಕಿದ್ದ ಮನೆಯಲ್ಲಿ ಅವರ ಮಗ ಶ್ರೀ ಪುರುಷೋತ್ತಮ ಗಲಗಲಿಯವರನ್ನು ಸಂದರ್ಶನ ಮಾಡಿ ಪ್ರಶ್ನೆಗಳನ್ನು ಕೇಳಿದಾಗ, ಮಧುರಚೆನ್ನರ ಶ್ರದ್ಧೆ ಎಂತಹುದು ಎಂದು ಒಂದು ಘಟನೆಯನ್ನು ವಿವರಿಸಿದರು. "ಬೇಂದ್ರೆಯವರನ್ನು ನಾವು 'ಕಾಕ' ಎಂದೇ ಕರೆಯುತ್ತಿದ್ದೆವು. 'ಮೇಘದೂತ' ಕಾವ್ಯವನ್ನು ನಮ್ಮ ಮನೆಯಲ್ಲಿ ಗೆಳೆಯರ ಗುಂಪಿನೊಂದಿಗೆ ಚರ್ಚಿಸಿದ್ದು ನೆನಪಿದೆ. ಮಧುರಚೆನ್ನರು 1953 ಆಗಸ್ಟ 15ಕ್ಕೆ ದೇಹ ಬಿಟ್ಟರು. ಅದಕ್ಕಿಂತ ಕೆಲವು ದಿನಗಳ ಹಿಂದೆ ತೀವ್ರ ಅನಾರೋಗ್ಯನಿಮಿತ್ತ ಆಸ್ಪತ್ರೆಯಿಂದ ಮನೆಗೆ ಕರೆದುಕೊಂಡು ಬಂದಿದ್ದೆವು. ಡಾಕ್ಟರ್ ಅವರ ತೀರ್ಮಾನವು ಇನ್ನೂ ಕೆಲವು ದಿನ ಮಾತ್ರ ಉಳಿಯುವುದು ಎಂದಿತ್ತು.

ಮನೆಯಲ್ಲಿ ಅನಾರೋಗ್ಯಕ್ಕೀಡಾಗಿದ್ದ ತಂದೆಯವರನ್ನು ನೋಡಲು ಬೇಂದ್ರೆಯವರು ಬಂದಿದ್ದರು. ಕ್ಯಾನ್ಸರ್‌ನಿಂದ ಬಳಲಿದ ಮನಸ್ಸಿಗೆ ಶಾಂತಿ ಸಿಗುತ್ತದೆ, ಎಲ್ಲರೂ ಮೃತ್ಯುಂಜಯ ಮಂತ್ರ ಹೇಳಿ, ಚೆನ್ನಮಲ್ಲಪ್ಪನಿಗೂ ಸಮಾಧಾನವಾಗಲಿ ಎಂದು ಮಂತ್ರವನ್ನು ಮಧುರಚೆನ್ನರಿಗೂ ಹೇಳಿಕೊಟ್ಟರು. ನಾವೆಲ್ಲಾ ಪಠಿಸಿದೆವು. ಆದರೆ ಮಧುರಚೆನ್ನರು 'ತಾಯವ್ವ ತಾಯವ್ವ' ಎನ್ನುತ್ತಿದ್ದರು." ಎಂದು ಹೇಳಿದರು. ಶ್ರೀ ಅರವಿಂದಾಶ್ರಮ, ಶ್ರೀ ಮಾತೆಯವರ ಬಗ್ಗೆ ಇದ್ದ ಅವರ ಶ್ರದ್ಧೆ ಜೀವಿತದ ಕೊನೆ ಕ್ಷಣಗಳಲ್ಲೂ ಅವರನ್ನು ಬಿಟ್ಟಿರಲಿಲ್ಲ ಎಂಬುದಕ್ಕೆ ಈ ಒಂದು ನಿದರ್ಶನ ಸಾಕ್ಷಿಯಾಗಿದೆ. ಅದು ಅವರು ಶ್ರಿಮಾತೆಯವರಲ್ಲಿ ಕಾಣುತ್ತಿದ್ದ ಆಧ್ಯಾತ್ಮಿಕ ಬೆಳಕು.

"ಗೆಳೆಯರ ಗುಂಪಿನ ಅಧ್ವರ್ಯುರು ನಿಜವಾದ ಗೆಳೆಯನ ಅಂತ್ಯ ದರ್ಶನಕ್ಕಾಗಿ ಕೈಮುಗಿದು ನಿಂತರು. ಕಂಠ ಬಿಗಿದು ಮಾತು ಕಟ್ಟಿದ್ದರಿಂದ ಗಂಭೀರವಾದ ಮೌನದಲ್ಲಿ ಮಹಾಕವಿಯು ಕಾವ್ಯರ್ಷಿಯನ್ನು ಅದಾವ ಭಾಷೆಯಲ್ಲಿಯೋ ಮಾತಾಡಿ ಬೀಳ್ಕೊಟ್ಟರು. 'ಅಲ್ಲಮಪ್ರಭುಗಳೇ, ನಿಮ್ಮ ಬಸವಣ್ಣನವರನ್ನು ಎಲ್ಲಿ ಬಿಟ್ಟಿರಿ?' ಎಂದ ಬಸಮ್ಮನವರ ಆಕ್ರೋಶವು ಅಲ್ಲಿ ನಿಂತಿದ್ದವರನ್ನೆಲ್ಲಾ ಕರಗಿಸಿಬಿಟ್ಟಿತು."1 ಈ ದೃಶ್ಯವನ್ನು ಕಂಡ ಸಿಂಪಿ ಲಿಂಗಣ್ಣನವರು ದಾಖಲಿಸಿರುವ ಈ ಘಟನೆಯೂ ಕೂಡ ವ್ಯೂಮಮೂರ್ತಿ ಅಲ್ಲಮನಂತಹ ವ್ಯಕ್ತಿತ್ವದ ಬೇಂದ್ರೆ, ಭಕ್ತಿಯ ಮೂಲಕವೇ ಭಂಡಾರಿಯಾದ ಬಸವಣ್ಣನ ವ್ಯಕ್ತಿತ್ವದ ಮಧುರಚೆನ್ನರ ವ್ಯಕ್ತಿತ್ವವನ್ನು ನಾವು ವಿವರವಾಗಿ ತಿಳಿದುಕೊಂಡು ಅವರಿಬ್ಬರ ಆಧ್ಯಾತ್ಮಿಕ ಸೂಕ್ಷ್ಮಗಳನ್ನು ಅರಿಯಬಹುದಾಗಿದೆ.

"ಚನ್ನಮಲ್ಲಪ್ಪನನ್ನು ಹೂತಿಲ್ಲ, ಬಿತ್ತಿದ್ದೇವೆ" 2 ಎನ್ನುವ ಬೇಂದ್ರೆಯವರ ಮಾತಿನಲ್ಲಿ ಆತ್ಮವನ್ನು ಶೋಧಿಸಿಕೊಂಡು ಆಧ್ಯಾತ್ಮ ಮಾರ್ಗದಲ್ಲಿ ಬದುಕಿ ಲೌಕಿಕ ಜೀವನದ ಅಶಾಶ್ವತೆಯನ್ನು ಮಧುರಚೆನ್ನರ ಆಧ್ಯಾತ್ಮ ಬಾಂಧವ್ಯವು ಸದಾ ಕುಡಿಯೊಡೆಯುವ ಚಿಂತನೆಯಾಗಿದೆ..

ನವೋದಯ ಕಾಲಘಟ್ಟದ ಈ ಇಬ್ಬರು ಕವಿಗಳ ಸಹಜ ಜೀವನದ ಈ ಘಟನೆಗಳಲ್ಲಿ
ಲೌಖಿಕದೊಳಗಿದ್ದೂ ಪಾರಮಾರ್ಥವನ್ನು ಸಾಧಿಸಿಕೊಳ್ಳುವ ಸೂಕ್ಷ್ಮತೆ ಕಂಡುಬರುತ್ತದೆ.
ಬೆಳಕಿನ ಬಾಂಧವ್ಯದಿಂದ ತಾಯ ಸೆರಗ ಹಿಡಿದೆವು
ಬೆಳಕಿನಿಂದ ಬಂದೆವಣ್ಣ ಬೆಳಕಿನತ್ತ ನಡೆದೆವು
-ಅರಳು ಮರಳು; 'ಚೈತ್ಯಾಲಯ' ;

ಈ ಬೆಳಕಿನ ಬಾಂಧವ್ಯದಿಂದ ಬಂದ ನಾವು ನಮ್ಮೊಳಗಿನ ದ್ವೇಷ, ಅಸೂಯೆ, ಅಶಾಂತಿಗಳನ್ನು ನಿವಾರಿಸಿಕೊಂಡು ಬೆಳಕಿನತ್ತ ನಡೆಯಬೇಕೆಂಬುದು ಬೇಂದ್ರೆಯವರ ಅಧ್ಯಾತ್ಮಿಕ ಚಿಂತನೆಯಾಗಿದೆ.

ಒಟ್ಟಾರೆಯಾಗಿ ನಾವು ನಮ್ಮ ಬದುಕಿನ ಸಂತೋಷಗಳನ್ನು ಸದಾ ಹೊರಗೇ ಹುಡುಕುತ್ತೇವೆ ನಮ್ಮೊಳಗೇ ಇರುವ ಪ್ರೀತಿ, ಸ್ನೇಹ ಬಾಂಧ್ಯವ್ಯಗಳಲ್ಲಿ ಒಂದು ಮಹತ್ತಾದ ಆಧ್ಯಾತ್ಮಿಕ ಸೆಲೆಯಿದೆ ಎಂಬುದನ್ನು ಮರೆತಿದ್ದೇವೆ. ಇಂತಹ ಜೀವಸೆಲೆಗಳನ್ನು ಪ್ರತೀಷಿಸುವ ಕಾವ್ಯವನ್ನು ಬೇಂದ್ರೆ ಮತ್ತು ಮಧುರಚೆನ್ನರು ಕನ್ನಡ ಕಾವ್ಯಲೋಕಕ್ಕೆ ನೀಡಿದ್ದಾರೆ.

**ಅಡಿಟಿಪ್ಪಣಿಗಳು:** ಸಿಂಪಿ ಲಿಂಗಣ್ಣ; ಮಧುರಚೆನ್ನರ ಸ್ಮೃತಿಗಳು; ಪುಟ 110. ಅದೇ ಪುಟ

**ಪರಾಮರ್ಶನ ಗ್ರಂಥಗಳು :**

[1] ಮಲ್ಲೇಪುರಂ ಜಿ. ವೆಂಕಟೇಶ; 2017; ಕಾವ್ಯವ್ಯಾಖ್ಯಾನ ಕಥನ, ಕನ್ನಡ ಕವಿತೆಗಳ ಕುರಿತ ಬರಹಗಳ ಕಟ್ಟು; ಸಪ್ನ ಬುಕ್ ಹೌಸ್, ಗಾಂಧೀನಗರ, ಬೆಂಗಳೂರು.
[2] ಕೃಷ್ಣಪ್ಪ ಜಿ.; 2018; ಬೇಂದ್ರೆ ಕಾವ್ಯ: ಪದನಿರುಕ್ತ; ವಂಶಿ ಪಬ್ಲಿಕೇಷನ್ಸ್, ಬೆಂಗಳೂರು.
[3] ಶಿವಾರೆಡ್ಡಿ ಕೆ.ಸಿ. (ಸಂ.); 1999; ಜೋಗಿ, ಶತಮಾನದ ಕವಿತೆ-ಅಂಬಿಕಾತನಯದತ್ತ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ.
[4] ಕೃಷ್ಣಪ್ಪ ಜಿ.; 2001; ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ; ಶ್ರೀರಂಗ ಪ್ರಕಾಶನ, ಮೈಸೂರು.
[5] ಕೃಷ್ಣಪ್ಪ ಜಿ.; 2008; ಬರಹದಲ್ಲಿ ಬೇಂದ್ರೆಯವರ ಬದುಕು; ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಪ್ರಸಾರಾಂಗ, ಧಾರವಾಡ.
[6] ರಾನಡೆ.ಆರ್.ಡಿ.; 1962; ಕನ್ನಡ ಸಂತರ ಪರಮಾರ್ಥ ಪಥ; ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
[7] ಶ್ರೀನಿವಾಸರಾಜು ಚಿ.; 2000; ಬೇಂದ್ರೆ ಸಾಹಿತ್ಯ ಒಂದು ಅಧ್ಯಯನ; ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು.
[8] ಮಧುರಚೆನ್ನ: 2011; ನನ್ನ ನಲ್ಲ; ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
[9] ಮಧುರಚೆನ್ನ: 2015; ಆತ್ಮಶೋಧ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.